ಓ.ಎಸ್. ನಂ.5/2017 ಪಿ.ಡಬ್ಲ್ಯೂ.1

ಸಾಕ್ಷಿಯ ಹೆಸರುಃ ವಿ.ಎಸ್. ಪುಟ್ಟಣ್ಣಯ್ಯ

ದಿನಾಂಕಃ **01-10-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1** ಮತ್ತು **2** ಪ್ರತಿವಾದಿ ಪರ ಶ್ರೀ ಬಿ ಎಂ ವಕೀಲರಿಂದಃ

6) ನಮ್ಮ ವಿವಾಹ 1993 ರಲ್ಲಿ ನಡೆದಿರುತ್ತದೆ. ಸಾಕ್ಷಿಗೆ ಈಗ ಅವರ ಆಮಂತ್ರಣ ಪತ್ರಿಕೆಯನ್ನು ತೋರಿಸಿ, ಅದರ ಪ್ರಕಾರ ತಮ್ಮ ಮದುವೆ ದಿನಾಂಕಃ01.07.1994 ರಂದು ನಡೆದಿರುತ್ತದೆ ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಆಮಂತ್ರಣ ಪತ್ರಿಕೆಯನ್ನು ನಿಡಿ**-06** ಎಂದು ಗುರುತಿಸಲಾಯಿತು. ನಿಡಿ-06 ರ ಪ್ರಕಾರ ಈ ಮದುವೆಯನ್ನು ನೆರವೇರಿಸಿದವರು ಪಿ.ಸೋಮಣ್ಣ ಎಂದರೆ ಸಾಕ್ಷಿ ಅವರು ಆಮಂತ್ರಣ ಪತ್ರಿಕೆಯನ್ನು ತಯಾರಿಸಿದವರು ಎನ್ನುತ್ತಾರೆ. ನನಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ನನ್ನ ಹೆಣ್ಣು ಮಕ್ಕಳು ಹುಟ್ಟಿದ ನಂತರ ಎಲ್ಲಾ ಶಾಸ್ತ್ರಗಳನ್ನು ಪಿ.ಸೋಮಣ್ಣ ಮತ್ತು ಭಾಗ್ಯಮ್ಮ ಮಾಡಿರುತ್ತಾರೆ ಎಂದರೆ ಸುಳ್ಳು. ಎಲ್ಲಾ ಶಾಸ್ತ್ರಕ್ಕೆ ಅವರು ರೂ.8 ರಿಂದ 10 ಲಕ್ಷ ರೂಪಾಯಿ ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿರುತ್ತಾರೆ ಎಂದರೆ ಸುಳ್ಳು.

7) ನಿಪಿ-7 ರ ಪ್ರಕಾರ ದಾವಾಸ್ವತ್ತಿನಲ್ಲಿರುವ ಸರ್ವೆ ನಂ.27/5 ಎ2 ರಲ್ಲಿನ 19 ಗುಂಟೆ ಜಮೀನು 1976-77 ನೇ ಇಸವಿಯಲ್ಲಿ ಅನ್ಯಕ್ರಾಂತವಾಗಿದೆ ಎಂದು ನಮೂದಿಸಿದೆ ಎಂದರೆ ಸರಿ. ನಿಪಿ-9 ರ ಪ್ರಕಾರ ಈ ಸ್ವತ್ತು ಚಂದಗಾಲ ಗ್ರಾಮದ ಗ್ರಾಮಠಾಣಾದಲ್ಲಿದೆ ಎಂದರೆ ಸರಿ. ನಿಪಿ-19 ರ ಪ್ರಕಾರ ಪುಟ್ಟಸ್ವಾಮಪ್ಪರವರಿಂದ ಸಿ.ಪಿ.ಭಾಗ್ಯರವರ ಹೆಸರಿಗೆ ಖಾತೆಯಾಗಿದೆ ಎಂದರೆ ಸಾಕ್ಷಿ ಅದನ್ನು ನಮ್ಮ ಗಮನಕ್ಕೆ ಬಾರದೇ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಸಿ.ಪುಟ್ಟಸ್ವಾಮಪ್ಪರವರು ನನ್ನ ಹೆಂಡತಿಗೆ ಆಸ್ತಿ ನೀಡಿದ ಸಮಯದಲ್ಲಿಯೇ ಭಾಗ್ಯಮ್ಮರವರ ಹೆಸರಿಗೂ ಕೂಡ ದಾವಾಸ್ವತ್ತನ್ನು ನೀಡಿರುತ್ತಾರೆ ಎಂದರೆ ಸುಳ್ಳು. ದಾವಾಸ್ವತ್ತು ಚಂದಗಾಲು ಗ್ರಾಮದಲ್ಲಿದ್ದು, ಗ್ರಾಮಠಾಣಾ ವ್ಯಾಪ್ತಿಯಲ್ಲಿದೆ ಎಂದರೆ ಸರಿ.

8) ನಿಪಿ-07ರ ಪ್ರಕಾರ ದಾಖಲೆಯನ್ನು ಕೇಳಿದವರ ಹೆಸರು ಪುಟ್ಟಣ್ಣಯ್ಯ ಎಂದು ಬರೆದಿದೆ ಎಂದರೆ ಸರಿ. ಆ ಪುಟ್ಟಣ್ಣಯ್ಯ ನಾನೇ ಎಂದರೆ ಸರಿ. ಅದೇ ರೀತಿ ನಿಪಿ-08, ನಿಪಿ-09, ನಿಪಿ-10, ನಿಪಿ-11, ನಿಪಿ-12, ನಿಪಿ-13, ನಿಪಿ-14, ನಿಪಿ-15, ನಿಪಿ-16, ನಿಪಿ-17 ಮತ್ತು ನಿಪಿ-18ಗಳನ್ನು ಪುಟ್ಟಣ್ಣಯ್ಯರವರೇ ಅರ್ಜಿದಾರರಾಗಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿ 2ನೇ ಪ್ರತಿವಾದಿ ಸಿ.ಪಿ.ಭಾಗ್ಯರವರಿಗೆ ಅವರ ತಂದೆ ಕಡೆಯಿಂದ ಬಂದ ಸ್ವತ್ತನ್ನು ಬಿಟ್ಟು ಬೇರೆಯವರ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಲಿಂಗಪ್ಪ ಉಃ ಪುಟ್ಟಸ್ವಾಮಪ್ಪರವರು ಸರ್ವೆ ನಂ.27/5ಎ1 ಮತ್ತು ಸರ್ವೆ ನಂ.27/5ಎ2 ರಲ್ಲಿನ ಸ್ವತ್ತುಗಳನ್ನು ಸ್ವಯಾರ್ಜಿತವಾಗಿ ಕೊಂಡಿದ್ದರು ಎಂದರೆ ಸಾಕ್ಷಿ ಅದರಲ್ಲಿರುವ 12 ಗುಂಟೆ ಜಮೀನನ್ನು ಮಾತ್ರ ಕ್ರಯಕ್ಕೆ ಕೊಂಡಿದ್ದರು ಎನ್ನುತ್ತಾರೆ. ಅವರು ಸಂಪೂರ್ಣವಾಗಿ 24 ಗುಂಟೆ ಜಮೀನನ್ನು ಕ್ರಯಕ್ಕೆ ಕೊಂಡಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸಂಪೂರ್ಣ 24 ಗುಂಟೆ ಜಮೀನನ್ನು ಅವರ ತಂದೆಯಿಂದ ಪಡೆದು ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

9) 2 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಆರ್ಥಿಕವಾಗಿ ಚೆನ್ನಾಗಿದ್ದು, ನಾನು ಮತ್ತು ನನ್ನ ಪತ್ನಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಮೃತ ಸಿ.ಮುದ್ದಪ್ಪರವರ ಸಹಿಗಳನ್ನು ನಕಲು ಮಾಡಿ, ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಪಿ.ಸೋಮಣ್ಣರವರ ಸಹಿಗಳನ್ನು ಸಹ ನಕಲು ಮಾಡಿ, ಅವರ ನಿವೇಶನವನ್ನು ಕಬಳಿಸುವ ಸಲುವಾಗಿ ಮೈಸೂರಿನ ನ್ಯಾಯಾಲಯದಲ್ಲಿ ದಾವೆಯನ್ನು ನಾನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-01 ಮತ್ತು 2ನ್ನು ಮೃತ ಮಂಜುನಾಥ ಉಃ ಪಾಪಣ್ಣರವರು ತಂದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.